For more job news visit : www.kpscvaani.com

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172/22866302
ಫ್ಯಾಕ್ಸ್: 080-22863576/22861665
Email:dmabir@gmail.com
Website:www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸಂಖ್ಯೆ:698396/DMA/EST3/CMIS/3/2022 ದಿನಾಂಕ: 29.06.2024

ಅಧಿಸೂಚನೆ

ವಿಷಯ : ಪೌರಾಡಳಿತ ನಿರ್ದೇಶನಾಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಮತ್ತು ಕಲಬುರಗಿ ಮಹಾನಗರಪಾಲಿಕೆಗಳಲ್ಲಿ ಬಾಕಿ ಇರುವ "ಸಿ" ಗುಂಪಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ .

*****

ಪೌರಾಡಳಿತ ನಿರ್ದೇಶನಾಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಮತ್ತು ಕಲಬುರಗಿ ಮಹಾನಗರಪಾಲಿಕೆಗಳಲ್ಲಿ ಈ ಕೆಳಕಂಡ "ಸಿ" ವೃಂದದ ನೇರನೇಮಕಾತಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಹುದ್ದೆಯ ಹೆಸರು	ವೇತನ ಶ್ರೇಣಿ	ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ	ಮೀಸಲಾತಿ ವರ್ಗೀಕರಣ	
				ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು (ಕಲಬುರಗಿ ಮಹಾನಗರಪಾಲಿಕೆ)	27650-650-29600-750-32600-850-36000-950-39800-1100-46400-1250-52650	01	1-ಸಾ.ಅ	–
2.	ದ್ವಿತೀಯ ದರ್ಜೆ ಸಹಾಯಕರು (ಬೆಳಗಾವಿ ಮಹಾನಗರಪಾಲಿಕೆ)	21400-500-22400-550-24600-600-27000-650-29600-750-32600-850-36000-950-39800-1100-42000	01	1-ಸಾ.ಅ	–
		ಒಟ್ಟು	02	02	–

ಅರ್ಹತೆಗಳು:

1. **ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು:** ಸರ್ಕಾರದಿಂದ ಅಂಗೀಕೃತವಾದ ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿರಬೇಕು.
2. **ದ್ವಿತೀಯ ದರ್ಜೆ ಸಹಾಯಕರು :** ಪಿ.ಯು.ಸಿ/ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.
3. ದಿನಾಂಕ:01.01.2024 ರಂದು ಇದ್ದಂತೆ ಅಭ್ಯರ್ಥಿಯು 18 ವರ್ಷಗಳು ಪೂರೈಸಿದ್ದು ಗರಿಷ್ಠ ವಯೋಮಿತಿ 40 ವರ್ಷಗಳೊಳಗೆ ಇರಬೇಕು.

For more job news visit : www.kpscvaani.com

ಷರತ್ತುಗಳು:

1. ಅಭ್ಯರ್ಥಿಗಳು ಅರ್ಜಿಸಲ್ಲಿಸುವಾಗ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂದರ್ಭಾನುಸಾರ ಸಲ್ಲಿಸಬೇಕಾಗಿರುತ್ತದೆ.
    a) ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಪದವಿ ಪರೀಕ್ಷೆಗಳ ಅಂಕಪಟ್ಟಿ
    b) ಹುಟ್ಟಿದ ದಿನಾಂಕ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಕ್ಯುಮುಲೇಟಿವ್ ದಾಖಲೆ)
    c) ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರ
2. ಭಾರತೀಯ ನಾಗರೀಕನಾಗಿರತಕ್ಕದ್ದು.
3. ಅಭ್ಯರ್ಥಿಯ ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
4. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 20.07.2024 ರ ಸಂಜೆ 5.00 ಗಂಟೆ ಒಳಗೆ ಆಯ್ಕೆ ಪ್ರಧಿಕಾರ ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ತಲುಪಿಸಬೇಕು. ವಿಳಂಬವಾಗಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ವಿದ್ಯಾರ್ಹತೆ ಮತ್ತು ಗಳಿಸಿರುವ ಅಂಕಗಳ ಆಧಾರದ ಮೇಲೆ ಆಯ್ಕೆಯನ್ನು ಪರಿಗಣಿಸಲಾಗುವುದು.
6. ಪಾಸ್ ಪೋರ್ಟ್ ಸೈಜಿನ ಭಾವಚಿತ್ರ ಲಗತ್ತಿಸಬೇಕು.
7. ಅಭ್ಯರ್ಥಿಗಳ ನಡತೆ ಬಗ್ಗೆ ಇಬ್ಬರು ಗೌರವಾನ್ವಿತರಿಂದ ದೃಢೀಕರಣ ಒದಗಿಸುವುದು.
8. ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ ಹಾಗೂ ಕ್ರಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
9. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
10. ಸದರಿ ನೇಮಕಾತಿಯು, ನೇಮಕಾತಿ ಹಾಗೂ ಸಕ್ಷಮ ಪ್ರಾಧಿಕಾರವಾದ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

For more job news visit : www.kpscvaani.com

ಅರ್ಜಿ ನಮೂನೆ



ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ		
1.	ಅರ್ಜಿದಾರರ ಹೆಸರು	
2.	ಅರ್ಜಿದಾರರ ತಂದೆ ಹೆಸರು	
3.	ಜನ್ಮ ದಿನಾಂಕ:	
4.	ವಯಸ್ಸು	
5.	ಲಿಂಗ (ಪುರುಷ/ಮಹಿಳೆ)	
6.	ವಿದ್ಯಾರ್ಹತೆ	
7.	ಪಿಯುಸಿ/ಪದವಿಯಲ್ಲಿ ಪಡೆದ ಅಂಕ ಮತ್ತು ಶೇಕಡವಾರು.	
8.	ಮೀಸಲಾತಿ (ಪ.ಜಾ)	
9.	ಕನ್ನಡ ಭಾಷಾ ಜ್ಞಾನ (ಇದೆ/ಇಲ್ಲ)	
10.	ಅರ್ಜಿದಾರರ ಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ಸಂಖ್ಯೆ (ಪತ್ರ ವ್ಯವಹಾರಕ್ಕಾಗಿ)	

ಅರ್ಜಿದಾರರ ಸಹಿ

ಸೂಚನೆ:

1. ಅರ್ಜಿ ಸಲ್ಲಿಸಬೇಕಾದ ವಿಳಾಸ- ಆಯ್ಕೆ ಪ್ರಾಧಿಕಾರ ಮತ್ತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001.
2. ಮೇಲ್ಕಂಡ ಅರ್ಜಿಯ ನಮೂನೆಯಲ್ಲಿ ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ಪೂರಕ ದೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಅರ್ಜಿಯ ನಮೂನೆಯೊಂದಿಗೆ ಲಗತ್ತಿಸುವುದು.